ಒಳಪಟ್ಟು ಅವರನ್ನು ಬೇರೆ ಕಡೆಗೆ ಹಾಕಲಾಯಿತೋ ಅಥವಾ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ, ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.—ಕ್ರಮ ತೆಗೆದುಕೊಂಡಿದ್ದೇವೆ, ಅವರ ಅಪಾಯಿಂಟ್‌ಮೆಂಟ್ ಆರ್ಡರನ್ನು ಕ್ಯಾನಲ್ ಮಾಡಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ.—ಡೈರೆಕ್ಟರ ಹುದ್ದೆಗೆ ನೇಮಿಸಿಕೊಳ್ಳುವಾಗ ಯಾವುದಾದರೂ ಆಸ್ಪತ್ರೆಯಲ್ಲಿ ಔಷಧಿ ಕೊಟ್ಟ ಅಥವಾ ರೋಗಿಗಳನ್ನು ಚಿಕಿತ್ಸೆ ಮಾಡಿದ ಅನುಭವವಾಗಲೀ ಅಥವಾ ಯಾವುದಾದರೂ ಮೆಡಿಕಲ್ ಕಾಲೇಜಿನಲ್ಲಿ ಪಾಠ ಹೇಳಿದ ಅನುಭವವಾಗಲೀ, ಇದ್ದು ಯಾವುದೇ ಅನುಭವವಾಗಲೀ ಇಲ್ಲದೆ ಎಲ್ಲೋ ಮೆಡಿಸಿನ್ ವಿಭಾಗದಲ್ಲಿ ಔಷಧಿ ಹಾಕುವ ಕಾರ್ಯದಲ್ಲಿದ್ದವರನ್ನು ಮುಖ್ಯಾಧಿಕಾರಿಗಳ ಹುದ್ದೆಗೆ ನೇಮಿಸಿರುವುದರ ಕಾರಣವೇನು, ಸ್ವಾಮಿ ?

Sri Y. RAMAKRISHNA.—By virtue of seniority, he got the job.

Purchase of "Ram Priya" Building

38. Sri D.B. KALMANKAR (Aland).—

Will the Minister for Public Works be pleasd to state:—

(*a*) whether the 'Ram Priya' deal was abandoned by the Government as being very costly;

(*b*) on what date the Chief Engineer had given his opinion regarding the proposed purchase of the abovee building and on what date the negotiation for purchase of 'Ram Priya' building was held ?

A.— Sri K. LAKKAPPA (Minister for Public Works).—

(*a*) Yes.

(*b*) (1) 22-9-1967.
(2) 13-12-1967.

Sri D. B. KALMANKAR.—May I know the date on which the "Ram Priya" deal was abandoned, Sir?

Sri K. LAKKAPPA.—It was abandoned on 22-5-1968.

Sri D. B. KALMANKAR.—Is it a fact that on the eve of the election of the Leader of Congress Legislature party, this particular deal was abandoned as there was lot of controversy over that in order to smoothen the process of eletion, Sir ?

Sri K. LAKKAPPA.—Not so please.

ಶ್ರೀ ಎನ್. ಎ. ಚನ್ನೇಗೌಡ.—ಇದೇರೀತಿಯಲ್ಲಿ ಖಾಸಗೀ ಬಂಗಲೆಗಳನ್ನು ಕೊಂಡುಕೊಳ್ಳುವುದಕ್ಕೆ ಪತ್ರ ವ್ಯವಹಾರಗಳನ್ನು ನಡೆಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಅಂಥಾದ್ದೇನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ಸಿನ ಮುಖಂಡರ ಮುಖಾಂತರ ಬಂಗಲೆಗಳಿಗೆ ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳುವ ಪರಿಸ್ಥಿತಿ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ಅಂಥಾದ್ದೇನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಾಮಪ್ರಿಯಾ ಡೀಲ್ ಅಪ್ರಿಯವಾಯಿತು ಎಂದು ಬಿಟ್ಟರೇ ? ಕಾರಣ ಏನು ?

ಶ್ರೀ ಕೆ. ಲಕ್ಕಪ್ಪ.—ಕ್ವೆಶ್ಚನ್ ಕೇಳಿದ್ದಾರೆ, ಕಾಸ್ಟ್ ಜಾಸ್ತಿಯಾಯಿತು ಎಂದು ಕೇಳಿದ್ದಕ್ಕೆ ''ಹೌದು'' ಎಂದು ಹೇಳಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಹಿಂದಿನ ಮಾನ್ಯ ಲೊಕೋಪಯೋಗಿ ಶಾಖೆಯ ಮಂತ್ರಿಗಳು ಈಗ ಇಲ್ಲಿ ಮುಖ್ಯಮಂತ್ರಿಗಳಾಗಿ ಕೂತಿದ್ದಾರೆ. ಅವರು ಹೇಳಿದ್ದು ಜ್ಞಾಪಕ ಇದೆ. ಇದನ್ನು ಸ್ಟೂಲವಾಗಿ ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಂಡಿದ್ದೇವೆ. ಯಾವ ವಿಧವಾದ ನಷ್ಟವೂ ಇಲ್ಲ ಎಂದು ಹೇಳಿದರು. ಆದರೆ ನಷ್ಟವಾಗುತ್ತದೆ, ಸರಿಬರುವುದಿಲ್ಲ ಎಂದು ಡ್ರಾಪ್ ಮಾಡಿದ್ದೀರಿ ಎಂದು ತಾವು ಹೇಳುತ್ತೀರಿ. ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳಿದ್ದು ನಿಜವೋ ಅಥವಾ ನೀವು ಹೇಳುತ್ತಾ ಇರುವುದು ನಿಜವೋ ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಅದರಲ್ಲೂ ವಿರೋಧಪಕ್ಷದ ಸದಸ್ಯರು ತಾವು ಹೇಳಿದುದನ್ನು ಬಹಳ ಸಲ ಮರೆಯುತ್ತಾರೆ. ಈ ಸಭೆಯಲ್ಲಿ ಮೊದಲು ಪ್ರಶ್ನೆ ಬಂದಾಗ ಇದರ ಬಗ್ಗೆ ಪರಿಶೀಲನೆಮಾಡಿ ತೆಗೆದು ಕೊಳ್ಳಬೇಕು ಎನ್ನುವ ವಿಚಾರ ಇದೆ ಎನ್ನುವ ಮಾತು ಹೇಳಿದೆ. ಇದರ ಮೇಲೆ ನನಗೆ ಗೊತ್ತಾದ ಹಾಗೆ ಅರ್ಧ ಗಂಟೆ ಡಿಸ್ಕಷನ್ ಬಂತು. ಶ್ರೀಮಾನ್ ಕೆ. ಎಚ್. ಪಾಟೀಲರು ಹೇಳಿದರು ನಾವು 18 ಲಕ್ಷಕ್ಕೆ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ, ಆದರೆ ಅವರು 13 ಲಕ್ಷ 16 ಲಕ್ಷಕ್ಕೋ ಕೊಡುತ್ತಾರೆ ಎಂದು, ಬರೆದು ಕೊಟ್ಟಿದ್ದಾರೆ ಎಂದು. 13 ಲಕ್ಷಕ್ಕೋ 16 ಲಕ್ಷಕ್ಕೋ ಬರೆದು ಕೊಟ್ಟು 18 ಲಕ್ಷಕ್ಕೆ ತೆಗೆದುಕೊಳ್ಳುತ್ತಾ ಇದ್ದರೆ ಇದರಲ್ಲಿ ಏನೋ ನಡೆಯುತ್ತದೆ ಎನ್ನುವ ಸಂಶಯ ಬಂದು ಅರ್ಧ ಘಂಟೆ ಡಿಸ್ಕಷನ್ ಆಗಿ ನಾನು ಉತ್ತರ ಕೊಡುತ್ತಾ ಅವರು 13 ಲಕ್ಷಕ್ಕೋ 16 ಲಕ್ಷಕ್ಕೋ ಕೊಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ, ನನಗೆ ಗೊತ್ತಿರುವ ಇನ್‌ಫರ್ಮೇಷನ್ ಪ್ರಕಾರ 18 ಲಕ್ಷಕ್ಕೆ ಕೆಳಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತು ಕೇಳಿದ್ದೇವೆ, ಸೆಕ್ರೆಟರಿಯವರನ್ನು ನೆಗೋಷಿಯೇಟ್ ಮಾಡುವುದಕ್ಕೆ ಕಳುಹಿಸಿದರೆ ಆಗಲೂ ಕೂಡ ಇದಕ್ಕಿಂತ ಕಡಿಮೆ ಆಗುವುದಿಲ್ಲ ಇಲ್ಲದಿದ್ದರೆ ಬಿಡಿರಿ ಎನ್ನುವ ಮಾತು ಹೇಳಿದಾಗ ಶ್ರೀಮಾನ್ ಕೆ. ಹೆಚ್. ಪಾಟೀಲರು ನನ್ನ ಹತ್ತಿರ ಕಾಪಿ ಇದೆ, ಬೇಕಾದರೆ ವೆರಿಫೈ ಮಾಡಿ ಎಂದು ಕಾಪಿ ಕೊಟ್ಟಾಗ, ನಾನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದೆ. ಕಾಪಿ ಬಂದ ಮೇಲೆ ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗುವುದನ್ನು ನಿಲ್ಲಿಸಿದ್ದೇನೆ. ಆಮೇಲೆ ಟ್ರಾನ್ಸ್‌ಪೋರ್ಟ್ ಕಮಿಷನರಿಗೆ ಲೆಟರ್ ಬರೆದು ಅವರಿಂದ ಒರಿಜಿನರ್ ಲೆಟರ್ ತರಿಸಿ ಕೊಂಡೆವು ಅದನ್ನು ನೋಡಿದಮೇಲೆ ಈ ರೀತಿ ಆಫರ್ ಮಾಡಿದ್ದಾರೆ ಎನ್ನುವುದು ಗೊತ್ತಾಯಿತು. ಇದೆಲ್ಲಾ ಪರಿಶೀಲನೆ ಮಾಡುವ ಮೊದಲು ಇಷ್ಟೆಲ್ಲಾ ಗೊತ್ತಿರಲಿಲ್ಲ.

Sri L. SRIKANTAIAH.—Why did you suppress the document ?

ಶ್ರೀ ವೀರೇಂದ್ರಪಾಟೀಲ್.—ಪ್ರೊಫೆಸರ್ ಶ್ರೀಕಂಠಯ್ಯನವರು ನಮಾಧಾನ ತಾಳಬೇಕು. ನಾನು ಹೇಳಿದುದನ್ನು ಮುಗಿಸಿದ ಮೇಲೆ ಏನಾದರೂ ಇದರಲ್ಲಿ ಹೇಳಬೇಕಾದುದು ಇದ್ದರೆ ಕೇಳಿ ಹೇಳುವುದಕ್ಕೆ ತಯಾರಿದ್ದೇನೆ. ಏನು ನಡೆಯಿತು ಎನ್ನುವ ವಿಚಾರ ಹೇಳುತ್ತಾ ಇದ್ದೇನೆ. ಈರೀತಿ ಟ್ರಾನ್ಸ್‌ಪೋರ್ಟ್ ಕಮೀಷನರಿಂದ ಕಾಗದ ತರಿಸಿಕೊಂಡು ಇದರ ಬಗ್ಗೆ ಪರಿಶೀಲನೆ ಮಾಡಿದ ಮೇಲೆ 13—16 ಲಕ್ಷ ನನ್ನ ಮುಂದೆ ಹೈಲನಲ್ಲಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕಿಂತ ಕಡಿಮೆ ಕೊಡುತ್ತೇವೆ ಎಂದು ಅವರಿಗೆ ಬರೆದುಕೊಟ್ಟು ಈಗ 18 ಲಕ್ಷ ಕೇಳುತ್ತಾ ಇರುವುದರಿಂದ ಇಂತಹ ವ್ಯವಹಾರದಲ್ಲಿ ಕೈ ಹಾಕುವುದು ಸಾಧುವಲ್ಲ ಎಂದು ನಿರ್ಣಯ ತೆಗೆದುಕೊಂಡಿದ್ದೇವೆ. ಆ ವಿಚಾರ ಈ ರೀತಿ ಎಳೆದುಕೊಂಡು ಬಂದಿದೆ. ಕ್ವೆಶ್ಚನ್ ಹಾಕಲಾರದೆ ಹೋಗಿದ್ದರೆ, ಶ್ರೀಮಾನ್ ಕೆ. ಎಚ್. ಪಾಟೀಲರು ಕೇಳಲಾರದೇ ಹೋಗಿದ್ದರೆ, ನಾವು ಏನು ಮಾಡುವುದಕ್ಕೂ ಆಗುತ್ತಿರಲಿಲ್ಲ. ಅದಕ್ಕೂ ಕಡಿಮೆ ಕೊಡುತ್ತೇವೆ ಎಂದು ಹೇಳಿದ್ದರೆ ನಾವು ಈ ವಿಚಾರದಲ್ಲಿ ಕೈಹಾಕುವುದನ್ನು ಬಿಟ್ಟು ಬಿಡುತ್ತೇವೆ ಎಂದು ನಾನು ಭರವಸೆ ಕೊಟ್ಟಿದ್ದೇನೆ. ಅದರಂತೆ ಪರಿಶೀಲನೆ ಮಾಡಿದ ಮೇಲೆ, ಇದನ್ನು ಕೈಬಿಟ್ಟುಬಿಟ್ಟಿದ್ದೇವೆ. ಆದುದರಿಂದ ಲೀಡರ್‌ಷಿಪ್ ಎಲೆಕ್ಷನ್‌ಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ರಾಮಪ್ರಿಯ ಭವನವನ್ನು ಕೊಂಡುಕೊಳ್ಳಬೇಕೆಂದು ಯಾರು ಪ್ರಥಮವಾಗಿ ಇದರ ಮಾಲೀಕರ ಹತ್ತಿರ ಮಾತನಾಡಿದರು ? ಇದರ ವ್ಯವಹಾರ ಹೇಗೆ ಮುಂದು ವರೆಯಿತು ? What was the procedure that you adopted ?

ಶ್ರೀ ವೀರೇಂದ್ರಪಾಟೀರ್.—ಇದರ ಬಗ್ಗೆ ನಾನು ಹಿಂದೆ ಈ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಹೇಳಿದ್ದೇನೆ. ಅರ್ಧ ಘಂಟೆಯ ಚರ್ಚೆಯ ಕಾಲದಲ್ಲಿ ಹೇಳಿದ್ದೇನೆ. ಪುನರಪಿ ಅದನ್ನೇ ಹೇಳಬೇಕೆಂದರೆ ಅಡ್ಡಿ ಇಲ್ಲ. ಆದರೆ ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ.